ರಾಜ್ಯದ ಪ್ರಾಥಮಿಕ ಸಹಕಾರ ಮತ್ತು ಕೃಷಿ ಮತ್ತು ಗ್ರಾಮಾಭಿವೃದ್ಧಿ ಬ್ಯಾಂಕುಗಳ ಬಗ್ಗೆ.

೩೨೨. ಶ್ರೀ ಕೆ. ಬ. ಕೋಳಿವಾಡ (ರಾಣೆಬೆನ್ನೂರು).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧) ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳಲ್ಲಿ ಬಂಡವಾಳದ ಶೇರು ಮೌಲ್ಯವನ್ನು ರೂ. ೧೦ ರಿಂದ ೧೦೦ಕ್ಕೆ ಹೆಚ್ಚಿಸುವ ಬಗ್ಗೆ ಸಹಕಾರ ಸಂಘಗಳ ನಿಬಂಧಕರು ಸಂತ್ತೋಲೆ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

೨) ಅದರಂತೆ ತಾಲ್ಲೂಕು ಮಟ್ಟದ ಸಹಕಾರ ಸಂಘಗಳ ಹಾಗೂ ಸಹಕಾರಿ ಬ್ಯಾಂಕುಗಳ (ಅರ್ಬನ್ ಬ್ಯಾಂಕ್) ಬಂಡವಾಳದ ಶೇರು ಮೌಲ್ಯವನ್ನು ರೂ. ೧೦ ರಿಂದ ೧೦೦ ರೂ.ಗಳಿಗೆ ಹೆಚ್ಚಿಸುವ ವಿಚಾರವು ಸರ್ಕಾರದವರ ಪರಿಶೀಲನೆಯಲ್ಲಿದೆಯೇ ?

ಶ್ರೀಮತಿ ವಿನೋರಮ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮತ್ತು ಸಹಕಾರ ಸಚಿವೆಯವರು).—

೧) ಬಂದಿದೆ

೨) ಇಲ್ಲ

ಕೆ. ಎಂ. ಎಫ್ ಬಲ್ಕ್‌ವೆಂಡಿಂಗ್ ಬೂತುಗಳಲ್ಲಿ ಹಾಲನ್ನು ಸ್ಯಾಚೆಟ್‌ಗಳಲ್ಲಿ ಮಾರಾಟ ಮಾಡಲು ಕ್ರಮ ಕೈಗೊಳ್ಳುವ ಬಗ್ಗೆ

೧೮೨. ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಪಶುಸಂಗೋಪನೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆ ಎಂ. ಎಫ್. ಬಲ್ಕ್ ವೆಂಡಿಂಗ್ ಬೂತ್‌ಗಳಲ್ಲಿ ವಿದ್ಯುಚ್ಛಕ್ತಿ ಕೊರತೆಯಿಂದ ಹಾಲಿನ ಯಂತ್ರ ಸರಿಯಾಗಿ ಕೆಲಸ ಮಾಡದೆ ಕನ್ಸೇಷನರುಗಳು ಬಕೇಟುಗಳಲ್ಲಿ ಹಾಲನ್ನು ಸುರಿದುಕೊಂಡು ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಆ) ಈ ರೀತಿ ಮಾಡುವುದರಿಂದ ಬೆಂಗಳೂರು ನಗರ ಪ್ರದೇಶದಲ್ಲಿ ಕಲಬೆರಕೆ ಹಾಲಿನ ಮಾರಾಟ ಈ ಬಲ್ಕ್ ವೆಂಡಿಂಗ್ ಬೂತುಗಳಲ್ಲಿ ಹೆಚ್ಚಾಗುತ್ತಿರುವುದು ನಿಜವೆ ?

ಇ) ಈ ಬೂತುಗಳಿಂದ ಆಗುತ್ತಿರುವ ನಷ್ಟಗಳನ್ನು ತಪ್ಪಿಸಲು ಹಾಗೂ ವಿದ್ಯುತ್‌ನ್ನು ಉಳಿತಾಯ ಮಾಡಲು ಈ ಬೂತುಗಳಲ್ಲಿ ಏರುವ ಪವಾನಿಯಂತ್ರಣವನ್ನು ಕಿತ್ತು ಹಾಕಿ ಬೆಂಗಳೂರು ಡೈರಿಯವರು ಹಾಲನ್ನು ಮಾರಾಟ ಮಾಡುವಂತೆ ಸ್ಯಾಚೆಟ್‌ಗಳಲ್ಲಿ ತುಂಬಿ ಮಾರಾಟ ಮಾಡುವ ವ್ಯವಸ್ಥೆಯನ್ನು ಸರ್ಕಾರವು ಜಾರಿಗೆ ತರುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ, (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮತ್ತು ಪಶುಸಂಗೋಪನಾ ಸಚಿವರು).—

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಬೂತಿನಲ್ಲಿ ನಷ್ಟದ ಸಂಭವವಿಲ್ಲ. ಈ ಸಲಹೆಯು ಕೆ.ಎಂ.ಎಫ್. ಹಾಗೂ ಮದರ್ ಡೈರಿ ಸ್ಥಾಪಿಸಿದ ಧ್ಯೇಯಕ್ಕೆ ವಿರುದ್ಧವಾಗಿರುತ್ತದೆ.